B.PAC
Let's Be Better

ಪತ್ರಿಕಾ ಪ್ರಕಟಣೆ

ಬೆಂಗಳೂರು ಸುಸ್ಥಿರಾಭಿವೃದ್ಧಿ ಪ್ರಣಾಳಿಕೆ ಬಿಡುಗಡೆ

2030 ಕ್ಕೆ ಸುಸ್ಥಿರ, ಸುರಕ್ಷಿತ, ಸಮೃದ್ಧ ಮತ್ತು ಸ್ಥಿತಿಸ್ಥಾಪಕ ಬೆಂಗಳೂರು ನಿರ್ಮಾಣಕ್ಕೆ ನೇರ ದೃಷ್ಟಿ

24 ಆಗಸ್ಟ್ 2020, ಬೆಂಗಳೂರು: ಬೆಂಗಳೂರು ರಾಜಕೀಯ ಕಾರ್ಯ ಸಮಿತಿ (ಬಿ.ಪ್ಯಾಕ್) ತನ್ನ "ಪರಿಸರ ಸುಸ್ಥಿರತೆ ಕಾರ್ಯಕ್ರಮ"ವಾದ ಬಿ.ಗ್ರೀನ್ ಯೋಜನೆಯಡಿ 'ಬೆಂಗಳೂರು ಸುಸ್ಥಿರಾಭಿವೃದ್ಧಿ ಪ್ರಣಾಳಿಕೆ' ಬಿಡುಗಡೆಗೊಸಿದೆ. 2030 ವೇಳೆಗೆ ನಾಗರಿಕರು ಬೆಂಗಳೂರನ್ನು ನೋಡಬಯಸುವ ಕುರಿತ ನೇರ ದೃಷ್ಟಿಯಿಡುವಂತೆ ಈ ಪ್ರಣಾಳಿಕೆಯಿದೆ. ಪ್ರಣಾಳಿಕೆ ಅಡಿಯಲ್ಲಿ ಕೇಳಲಾಗುವ ಪ್ರಮುಖ ಅಂಶಗಳೆಂದರೆ, 1) ಈಗ ಬೆಂಗಳೂರಿನಲ್ಲಿ ಅಭಿವೃದ್ಧಿ ಕಾರ್ಯಸೂಚಿಯಲ್ಲಿ ಸುಸ್ಥಿರತೆಯನ್ನು ಕೇಂದ್ರಬಿಂದುವಾಗಿಸುವುದು 2) 2021 ವೇಳೆಗೆ ಪ್ರತ್ಯೇಕವಾದ "ಬೆಂಗಳೂರು ಸುಸ್ಥಿರತೆ ಇಲಾಖೆ" ಸ್ಥಾಪಿಸುವುದು 3) 2023 ರ ವೇಳೆಗೆ ಬೆಂಗಳೂರು ಸುಸ್ಥಿರತೆ ಮತ್ತು ಹವಾಮಾನ ಕ್ರಿಯಾ ಯೋಜನೆ ಪ್ರಾರಂಭಿಸುವುದು.

ಬೆಂಗಳೂರು ಸುಸ್ಥಿರಾಭಿವೃದ್ಧಿ ಪ್ರಣಾಳಿಕೆಯನ್ನು ಸರ್ಕಾರದ ಆಡಳಿತ ಹಾಗೂ ಸುಸ್ಥಿರತೆ ವಿಷಯತಜ್ಞರಿಂದ ಮಾಹಿತಿ ಪಡೆದು ಬಿ.ಪ್ಯಾಕ್ ಈ ಪ್ರಣಾಳಿಕೆಯನ್ನು ರೂಪಿಸಿದೆ. ಇದನ್ನು ತಜ್ಞರು, ಸರ್ಕಾರ ಮತ್ತು ನಾಗರಿಕರು ನೀಡುವ ಮತ್ತಷ್ಟು ಮಾಹಿತಿಯನ್ನು ಆಧರಿಸಿ ಪರಿಷ್ಕರಿಸಬಹುದಾದ ಕಾರ್ಯನಿರತ ದಾಖಲೆಯನ್ನಾಗಿರಿಸಲು ಉದ್ದೇಶಿಸಲಾಗಿದೆ. ಮುಂದಿನ ಕೆಲವು ತಿಂಗಳುಗಳಲ್ಲಿ ಸಮೀಕ್ಷೆಗಳು ಮತ್ತು ಚರ್ಚೆಗಳ ಮೂಲಕ ಮತ್ತಷ್ಟು ಮಾಹಿತಿಯನ್ನು ಕೋರಲಾಗುವುದು. ನಂತರ 2021 ರ ಆರಂಭದಲ್ಲಿ ಮುಂದಿನ ಬಜೆಟ್‌ನಲ್ಲಿ ಸೇರಿಸಲು ಶಿಫಾರಸುಗಳ ಅಂತಿಮ ಪಟ್ಟಿಯನ್ನು ಕರ್ನಾಟಕ ಸರ್ಕಾರ ಮತ್ತು ಬಿಬಿಎಂಪಿಗೆ ಸಲ್ಲಿಸಲಾಗುವುದು.

ಬೆಂಗಳೂರು ಸುಸ್ಥಿರಾಭಿವೃದ್ಧಿ ಪ್ರಣಾಳಿಕೆಯು ಕೆಳಕಂಡ ದೃಷ್ಟಿಕೋನಗಳನ್ನು ಒಳಗೊಂಡಿದೆ.

- ಅಭಿವೃದ್ಧಿಕಾಮಗಾರಿಗಳಾದ ಸಾರಿಗೆ ಯೋಜನೆ ಮತ್ತು ಜಲಾನಯನ ಯೋಜನೆ ಅಥವಾ ನೀಲಿ-ಹಸಿರು ಮೂಲಸೌಕರ್ಯ ಯೋಜನೆಗಳು ರೂಪಿಸುವಾಗ ಹೆಚ್ಚು ಸಂಯೋಜಿತ ಮತ್ತು ಸುಸ್ಥಿರ ಭೂ ಬಳಕೆಗೆ ಒತ್ತು.
- ಪರಿಸರ ಸ್ನೇಹಿ ಸಾರಿಗೆ ಯೋಜನೆ, ಮೂಲಸೌಕರ್ಯ ಮತ್ತು ನೀತಿಗಳು ಕುರಿತು ಪ್ರಸ್ತುತವಿರುವ ಸಾರ್ವಜನಿಕ ಸಾರಿಗೆಯ 48% ಮಾದರಿಯಿಂದ

ಶೇ. 80 ಸಾರ್ವಜನಿಕ ಸಾರಿಗೆಯ ಮಾದರಿ ಪಾಲು ಮತ್ತು 2030 ರ ವೇಳೆಗೆ 15% ಮೋಟಾರುರಹಿತ ಸಾರಿಗೆ (ವಾಕಿಂಗ್ ಮತ್ತು ಸೈಕ್ಲಿಂಗ್) ಗೆ ಹೆಚ್ಚಿಸುವುದು.

- 2030 ರ ವೇಳೆಗೆ ತ್ಯಾಜ್ಯ ರಹಿತ ಬೆಂಗಳೂರು ಕನಸು ನನಸಾಗಿಸಲು ಇಂಧನ ದಕ್ಷತೆ, ನೀರಿನ ದಕ್ಷತೆ ಮತ್ತು ಜವಾಬ್ದಾರಿಯುತ ತ್ಯಾಜ್ಯ ನಿರ್ವಹಣೆಗೆ ಆದ್ಯತೆ ನೀಡುವ ಕಡ್ಡಾಯ ಹಸಿರು ಕಟ್ಟಡ ಸಂಹಿತೆಯತ್ತ ಹೊರಳುವುದು.
- ಶೇ.100 ನವೀಕರಿಸಬಹುದಾದ ಇಂಧನ ಮತ್ತು ವಿಶ್ವ ದರ್ಜೆಯ ನೈರ್ಮಲ್ಯ, ನೀರು ಮತ್ತು ತ್ಯಾಜ್ಯನೀರಿನ ನಿರ್ವಹಣೆಯತ್ತ ಸಾಗುವ ಮೂಲಕ ಹಸಿರು ಬೆಂಗಳೂರು ನಿರ್ಮಿಸುವುದು.
- ನಗರದಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ಹಸಿರು ಸ್ಥಳಗಳ ಸಂರಕ್ಷಣೆ ಮತ್ತು ಪುನಃಸ್ಥಾಪನೆ (ಪ್ರಸ್ತುತ ಶೇ.3 ಇದ್ದು, 2030 ಕ್ಕೆ ಶೇ.30ಕ್ಕೆ ಹೆಚ್ಚಳ) ಜಲಮೂಲಗಳು, ಜಲಾನಯನ ಪ್ರದೇಶಗಳು ಮತ್ತು ಕೆರೆಗಳು ಮತ್ತು ಮಳೆ ನೀರು ನಿರ್ವಹಣೆಗಾಗಿ ಹೆಚ್ಚಿನ ಮೂಲಸೌಕರ್ಯಗಳು ರೂಪಿಸುವುದು.
- ಯೋಜನೆ, ಮೂಲಸೌಕರ್ಯ ಮತ್ತು ಹೂಡಿಕೆ ಸೇರಿ ಎಲ್ಲಾ ಅಂಶಗಳಲ್ಲಿ ಹವಾಮಾನ ಮತ್ತು ವಿಪತ್ತು ಸನ್ನದ್ಧತೆಯ ಅಂಶಗಳು ಸೇರ್ಪಡೆಗೊಳಿಸುವುದು.
- ಸರ್ಕಾರದ ಅಭಿವೃದ್ಧಿ ಕಾರ್ಯಸೂಚಿಯಲ್ಲಿ ಎಲ್ಲಾ ನಾಗರಿಕರಿಗೆ ಸುರಕ್ಷತೆ ಮತ್ತು ಸಾಮಾಜಿಕ-ಆರ್ಥಿಕ ನ್ಯಾಯಯುತ ಪಾಲು ದೊರೆಯುವಂತೆ ಮಾಡುವುದು ಹಾಗೂ ಇನ್ನೂ ಇತ್ಯಾದಿ.

ಮುಂದಿನ ದಿನಗಳಲ್ಲಿ ಸುಸ್ಥಿರತೆ ಪ್ರಣಾಳಿಕೆಯ ಪ್ರತಿಯೊಂದು ಕ್ಷೇತ್ರದ ಮೇಲೆ ಮಾನದಂಡಗಳು ಮತ್ತು ನಿರ್ದಿಷ್ಟ ಗುರಿಗಳನ್ನು ಅಭಿವೃದ್ಧಿಪಡಿಸಲು ವಿವಿಧ ಸಂಸ್ಥೆಗಳೊಂದಿಗೆ ಕಾರ್ಯನಿರ್ವಹಿಸುತ್ತದೆ. ಮುಂದಿನ ಬಜೆಟ್‌ನಲ್ಲಿ ಅವುಗಳನ್ನು ಸೇರ್ಪಡೆಗೊಳ್ಳಲು ಸರ್ಕಾರಕ್ಕೆ ಶಿಫಾರಸುಗಳನ್ನು ಸಲ್ಲಿಸಲು ಬಿ.ಪ್ಯಾಕ್ ಸಹಯೋಗಿ ಸಂಸ್ಥೆಗಳೊಂದಿಗೆ ನಿಖಟವಾಗಿ ಕಾರ್ಯನಿರ್ವಹಿಸುತ್ತದೆ.

ಬೆಂಗಳೂರು ಸುಸ್ಥಿರಾಭಿವೃಧ್ಧಿ ಪ್ರಣಾಳಿಕೆ ಅಭಿಯಾನವು ನಾಗರಿಕರು, ಸರ್ಕಾರಿ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು, ಲಾಭರಹಿತ ಸಂಸ್ಥೆಗಳು, ಚಿಂತಕರ ಚಾವಡಿ, ವಿವಿಧ ಸಂಸ್ಥೆಗಳು, ಶಿಕ್ಷಣ ತಜ್ಞರು ಮತ್ತು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುತ್ತದೆ. ಅವರಿದ ಪ್ರತಿಕ್ರಿಯೆ ಸ್ವೀಕರಿಸುವುದಲ್ಲದೆ ಸುಸ್ಥಿರ ಭವಿಷ್ಯಕ್ಕಾಗಿ ಬೆಂಗಳೂರಿಗರು ಸಿದ್ಧರಾಗಿದ್ದಾರೆ ಎಂಬುದನ್ನು ನಿರೂಪಿಸಲು ಏಕೀಕೃತ ಬೆಂಬಲದ ಒಕ್ಕೂಟವನ್ನು ನಿರ್ಮಿಸಿಸುತ್ತದೆ.

ಬೆಂಗಳೂರು ನಗರದ ಪರಿಸರ ಸುಸ್ಥಿರತೆ ಕುರಿತು ಹಲವು ಗುಂಪುಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರು ಸುಸ್ಥಿರಾಭಿವೃದ್ಧಿ

ಪ್ರಣಾಳಿಕೆಯ ಗುರಿಯೂ ಅದೇ ಆಗಿದ್ದು, ಈ ಅಭಿಯಾನದ ಗುರಿಯು ಸಾಮಾನ್ಯ ವ್ಯಾಪಕ ಗುರಿಯನ್ನು ಸೃಷ್ಟಿಸುವುದೇ ಆಗಿದೆ. ಇದರಿಂದ ಎಲ್ಲರ ಪ್ರಯತ್ನಗಳು ಸಂಯೋಜಿತವಾಗಿ ಏಕೀಕೃತವಾಗಿರುತ್ತವೆ. 2030 ರ ವೇಳೆಗೆ ಹಸಿರು ಬೆಂಗಳೂರು ರಚಿಸುವ ಸಮಗ್ರ ಮಾರ್ಗಸೂಚಿಯ ಭಾಗವಾಗುತ್ತವೆ.

- **ರೇವತಿ ಅಶೋಕ್, ಟ್ರಸ್ಟಿ ಮತ್ತು ಸಿಇಒ, ಬಿ.ಪ್ಯಾಕ್:** ''ಸುಸ್ಥಿರ ನಗರ ನಿರ್ಮಾಣಕ್ಕೆ ಬೆಂಗಳೂರಿನಲ್ಲಿ ದೊಡ್ಡಮಟ್ಟದಲ್ಲಿ ಕೆಲಸಗಳು ನಡೆಯುತ್ತಿವೆ. ಆದರೆ ಎಲ್ಲಾ ಪ್ರಯತ್ನಗಳ ಸಮಗ್ರ ದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಸಂಯೋಜಿಸಬೇಕಾಗಿದೆ. ಬೆಂಗಳೂರಿಗೆ ನಗರಮಟ್ಟದಲ್ಲಿ ನಾಯಕತ್ವ ಹಾಗೂ ಸಂಪನ್ಮೂಲಗಳು ಬೇಕಾಗುತ್ತವೆ. ಬೆಂಗಳೂರು ಸುಸ್ಥಿರಾಭಿವೃದ್ಧಿ ಪ್ರಣಾಳಿಕೆ ಪೂರ್ಣಗೊಳಿಸಲು ಎಲ್ಲಾ ಪ್ರತಿಕ್ರಿಯೆಗಳು ಮತ್ತು ಸಹಯೋಗವನ್ನು ನಾವು ಸ್ವಾಗತಿಸುತ್ತೇವೆ

ಗಮನಿಸಿ: ಬೆಂಗಳೂರು ಸುಸ್ಥಿರಾಭಿವೃದ್ಧಿ ಪ್ರಣಾಳಿಕೆ ನೋಡಲು ಇಲ್ಲಿ www.bpac.in/bengaluru-sustainability-manifesto/ ಮಾಡಿ. ಹಾಗೆಯೇ ಬಿ.ಪ್ಯಾಕ್ ಅನ್ನು ಸಾಮಾಜಿಕ ಜಾಲತಾಣಗಳಾದ ಟ್ವಿಟರ್, ಫೇಸ್ಬುಕ್, ಲಿಂಕ್ಡ್‌ಇನ್ ನಲ್ಲಿ ಫಾಲೋ ಮಾಡಿ. ಅಥವಾ ಅಧಿಕೃತ ವೆಬ್‌ಸೈಟ್ @BPACofficial ನೋಡಿ.

ಬಿ.ಪ್ಯಾಕ್ ಕುರಿತು:
ಬೆಂಗಳೂರು ರಾಜಕೀಯ ಕ್ರಿಯಾ ಸಮಿತಿ (ಬಿ.ಪ್ಯಾಕ್) ಒಂದು ಪಕ್ಷೇತರ ನಾಗರಿಕರ ಗುಂಪಾಗಿದ್ದು, ಬೆಂಗಳೂರಿನಲ್ಲಿ ಆಡಳಿತವನ್ನು ಸುಧಾರಿಸುವ ಮತ್ತು ನಗರದ ಪ್ರತಿಯೊಬ್ಬ ನಾಗರಿಕರ ಜೀವನ ಮಟ್ಟವನ್ನು ಉತ್ತಮಪಡಿಸುವ ಗುರಿಯನ್ನು ಹೊಂದಿದೆ. ಉತ್ತಮ ಆಡಳಿತ ಪದ್ಧತಿಗಳು, ಸರ್ಕಾರದ ಎಲ್ಲಾ ವಿಭಾಗಗಳಲ್ಲಿ ಸಮಗ್ರತೆ ಮತ್ತು ಪಾರದರ್ಶಕತೆ, ನಗರದ ಮೂಲಸೌಕರ್ಯಗಳ ಗುಣಮಟ್ಟ ಸುಧಾರಿಸುವುದು, ಬೆಂಗಳೂರು ನಗರದ ಎಲ್ಲಾ ಹಂತದ ಆಡಳಿತದಲ್ಲಿ ಸಾರ್ವಜನಿಕ ಕಚೇರಿಗೆ ಪ್ರಬಲ ಅಭ್ಯರ್ಥಿಗಳನ್ನು ಗುರುತಿಸುವುದು ಮತ್ತು ಬೆಂಬಲಿಸುವುದು ಬಿ.ಪ್ಯಾಕ್‌ನ ಮೂಲ ಉದ್ದೇಶವಾಗಿದೆ.

ಬಿ.ಗ್ರೀನ್ ಕುರಿತು:
ಈ ಅಭಿಯಾನವು ಬೆಂಗಳೂರು ರಾಜಕೀಯ ಕಾರ್ಯ ಸಮಿತಿ (ಬಿ.ಪ್ಯಾಕ್)ಯ "ಪರಿಸರ ಸುಸ್ಥಿರತೆ ಕಾರ್ಯಕ್ರಮ"ವಾದ ಬಿ.ಗ್ರೀನ್ ಯೋಜನೆಯಡಿ ಆರಂಭಿಸಲಾಗಿದೆ. ಪರಿಸರ ಸುಸ್ಥಿರತೆ, ಸಾಮಾಜಿಕ-ಆರ್ಥಿಕ ಅಭಿವೃದ್ಧಿ,

ಹವಾಮಾಣ ಬದಲಾವಣೆ ಮತ್ತು ಬೆಂಗಳೂರಿನಲ್ಲಿ ಜೀವನದ ಗುಣಮಟ್ಟವನ್ನು ಹೆಚ್ಚಿಸುವತ್ತ ಈ ಯೋಜನೆ ಗಮನಹರಿಸುತ್ತದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:

ಸಚಿನ್ ತಂತ್ರಿ
sachiin@bpac.in
9740511162